## ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/ಪ್ರಾಕಬೆಂ/ಆಂತರಿಕ/02/ಅರಕಾ/2009-10.

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-9,
ದಿನಾಂಕ: 20/05/2009

ಪ್ರಾಂಶುಪಾಲರು,
Reddy Janasangha First Grade College
16th Main Road, 3rd Block Koramangala,
BANGALORE-560034

ಮಾನ್ಯರೆ,

ವಿಷಯ:- ಅನುದಾನರಹಿತ ಕಾಲೇಜುಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ಇಡಿ/30/ಯುಪಿಸಿ/2002, ದಿ: 14-10-08.
2) ಮಾನ್ಯ ಆಯುಕ್ತರ ಕಛೇರಿಯ ದಿ: 01-12-2008ರ ಪತ್ರ ಸಂಖ್ಯೆ: ಕಾಶಿಇ/41/ಖಾಕಾವೇ/ಪಿಸಿಸಿ-3/2008-09.

* * * *

ದಿ: 01-06-1987 ರಿಂದ ದಿ: 01-07-1992ರವರೆಗಿನ ಅವಧಿಯಲ್ಲಿ ಪ್ರಾರಂಭಿಸಲಾದ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳ ತನಿಖೆ ನಡೆಸಿ ಕಾಲೇಜುಗಳು ನಿಗದಿತ ಮೂಲ ಭೂತ ಸೌಕರ್ಯ ಹೊಂದಿರುವ ಬಗ್ಗೆ ಹಾಗೂ ಸಂಬಂಧಪಟ್ಟ ಇತರ ಅಂಶಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಉಲ್ಲೇಖ(1) ಮತ್ತು (2)ರ ಪತ್ರಗಳಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಈ ಕಛೇರಿಯ ಅಧಿಕಾರಿಗಳಾದ ಡಾ: ರಾಜಶೇಖರ ರೆಡ್ಡಿ, ಸಹಾಯಕ ನಿರ್ದೇಶಕರು ಹಾಗೂ ಶ್ರೀ ಶಿವಪ್ರಸಾದ್, ಅಧೀಕ್ಷಕರು ಇವರುಗಳು ದಿನಾಂಕ: 30-06-2009 ರಂದು ತಮ್ಮ ಕಾಲೇಜಿನ ತಪಾಸಣೆ ನಡೆಸಲು ಭೇಟಿ ನೀಡಲಿದ್ದು, ಈ ಸಂಬಂಧ ತಮ್ಮ ಕಾಲೇಜು ಸರ್ಕಾರದಿಂದ ಪಡೆದ ಮಂಜೂರಾತಿ ಆದೇಶಗಳು ವಿಶ್ವವಿದ್ಯಾಲಯಗಳಿಂದ ಸಂಯೋಜನೆ ಪಡೆದ ಮತ್ತು ಸಂಯೋಜನೆ ನವೀಕರಿಸಿದ ಆದೇಶಗಳು ತಮ್ಮ ಕಾಲೇಜಿನಲ್ಲಿರುವ ಕೋರ್ಸುಗಳ ಕಾಂಬಿನೇಷನ್‌ಗಳ ವಿವರಗಳು, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರಗಳು (ಕೋರ್ಸುವಾರು ಮತ್ತು ಕಾಂಬಿನೇಷನ್‌ವಾರು) ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರಗಳು ಮತ್ತು ತಮ್ಮ ಕಾಲೇಜನ್ನು ವೇತನಾನುದಾನಕ್ಕೆ ಒಳಪಡಿಸಿದಲ್ಲಿ ತಗಲಬಹುದಾದ ಅಂದಾಜು ವೆಚ್ಚದ ವಿವರಗಳು ಮತ್ತು ತಪಾಸಣಾ ತಂಡದವರು ಕೇಳಬಹುದಾದ ಇತರ ಮಾಹಿತಿ ಹಾಗೂ ದಾಖಲಾತಿಗಳನ್ನು ಒದಗಿಸುವಂತೆ ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು.

ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಬೆಂಗಳೂರು-560 009.

25/5